ತಮಗೆ ನಮ್ಮ ವ್ಯವಸ್ಥೆ ಗೊತ್ತೇ ಇದೆ. ನಮಗೇಕೆ ಇಷ್ಟು ಲಘುವಾಗಿ ತಾವುಗಳು ಕಾಣುತ್ತೀರಿ ಎಂಬ ನೋವು ಆಗುತ್ತದೆ. ನಾವು ಏನಾದರೂ ಮಾತನಾಡಿದರೆ ಅದಕ್ಕೆ ಬೇರೆ ನೋಟೀಸನ್ನು ಅಟ್ರಿಬ್ಯೂಟ್ ಮಾಡುತ್ತೀರಿ. Are we here to pocket all theseinsults and go home? ಇಂಥ ನಡವಳಿಕೆಯಿಂದ ತಮ್ಮ ಸರ್ಕಾರಕ್ಕೆ ಗೌರವ ಬರುತ್ತದೆಯೇ?

ಶ್ರೀ ಸಿ. ಬೈರೇಗೌಡರು :— ನಾನು ಇದರ ಬಗ್ಗೆ ಸದನದಲ್ಲಿ ಕ್ಷಮೆಯಾಚಿಸುವೆ.

ಅಧ್ಯಕ್ಷರು ಇದರ ಬಗ್ಗೆ ಉತ್ತರವನ್ನು ನಾಳೆ ಸಂಬಂಧಪಟ್ಟ ಸಚಿವರು ಬಂದು ಕೊಡುತ್ತಾರೆ. ಆ ಮಂತ್ರಿಗಳು ನಾನು ಬರುವುದಕ್ಕಾಗುವುದಿಲ್ಲ, ನನ್ನ ಪರವಾಗಿ ಇಂಥವರು ಉತ್ತರ ಕೊಡುತ್ತಾರೆಂದು ನನಗೇನೂ ಪತ್ರವನ್ನು ಬರೆದು ತಿಳಿಸಿಲ್ಲ. ಬೇರೆ ಸಚಿವರ್ಯಾರಾದರು ಎದ್ದು ನಿಂತು ಏನಾದರೂ ಹೇಳಲು ನಾನು ಅವಕಾಶ ಕೊಡುವುದಿಲ್ಲ. ತಾವು ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರವನ್ನು ಪ್ರಸ್ತಾಪ ಮಾಡಿ ನಿನ್ನೆಯಿಂದ ಶಿಸ್ತಿನಿಂದ ತಾಳ್ಮೆಯಿಂದ ಕಾದಿದ್ದೀರಿ. ತಮ್ಮನ್ನು ಗೌರವದಿಂದ ಕಾಣತಕ್ಕ ಜವಾಬ್ದಾರಿ ನನಗಿದೆ. ಸಂಬಂಧಪಟ್ಟ ಸಚಿವರನ್ನೇ ಕರೆಸಿ ನಾಳೆ ಅವರಿಂದಲೇ ಉತ್ತರವನ್ನು ಕೊಡಿಸುತ್ತೇನೆ.

(೫) ಹಾಸನ ಜಿಲ್ಲಾ ಸಹಕಾರಿ ಬ್ಯಾಂಕ್ ನೌಕರರ ಮುಷ್ಕರ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) :— ಮಾನ್ಯ ಅಧ್ಯಕ್ಷರೆ, ಹಾಸನದ ಜಿಲ್ಲಾ ಸಹಕಾರಿ ಬ್ಯಾಂಕ್‌ನ ನೌಕರರು ಕೆಲವು ಬೇಡಿಕೆಗಳನ್ನು ಮುಂದಿಟ್ಟುಕೊಂಡು 22-3-1999ರಿಂದ ಸಾಂಕೇತಿಕವಾಗಿ ಮುಷ್ಕರ ಪ್ರಾರಂಭ ಮಾಡಿದ್ದಾರೆ. 1-3-1999 ರಿಂದ ಅನಿರ್ದಿಷ್ಟ ಕಾಲದವರೆಗಿನ ಮುಷ್ಕರವನ್ನು ಮಾಡುತ್ತಿದ್ದಾರೆ. ಇದರಿಂದ ಬ್ಯಾಂಕ್‌ನ ಚಟುವಟಿಕೆಗೆ ಸಂಪೂರ್ಣ ಸ್ಥಗಿತಗೊಂಡಿದೆ. ಗ್ರಾಹಕರಿಗೆ ತೊಂದರೆಯಾಗಿದೆ. ಸಾಮಾನ್ಯವಾಗಿ ಡಿ.ಸಿ. ಬ್ಯಾಂಕ್ ಮತ್ತು ಅದರ ಶಾಖೆಗಳಲ್ಲಿ ಅನೇಕ ಸಹಕಾರಿ ಸಂಘಗಳು ವ್ಯವಹಾರವನ್ನು ಮಾಡುತ್ತೇವೆ. ಈಗ ಅವರುಗಳ ವ್ಯವಹಾರವೆಲ್ಲ ಸ್ಥಗಿತಗೊಂಡಿದೆ. ಆದ್ದರಿಂದ ಬ್ಯಾಂಕು ದಿನನಿತ್ಯದ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಮತ್ತು ನೌಕರರ ನ್ಯಾಯಯುತವಾದ ಬೇಡಿಕೆಗಳೇನಿದೆ, ಅದನ್ನು ಈಡೇರಿಸಿ ಬ್ಯಾಂಕ್ ನ ಕಾರ್ಯಕಲಾಪ ನಡೆಸಿಕೊಂಡು ಹೋಗಲು ಸರ್ಕಾರ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂತೆ ಹಾಸನದ ಡಿ.ಸಿ.ಸಿ. ಬ್ಯಾಂಕ್‌ನ ನೌಕರರು ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ. ನಾವು ಅಧಿಕಾರ ತೆಗೆದುಕೊಂಡಾಗ ಆ

ಡಿ.ಸಿ.ಸಿ. ಬ್ಯಾಂಕು ಮುಳುಗಡೆಯಾಗುವ ಮಟ್ಟಕ್ಕೆ ಬಂದಿತ್ತು. ಅದನ್ನು ಇವತ್ತು ಸುಧಾರಿಸಿ ಒಂದು ಹಂತಕ್ಕೆ ತಂದಿದ್ದೇವೆ. ಆದರೆ ದುರಾದೃಷ್ಟವಶಾತ್ ಅಲ್ಲಿನ ನೌಕರರು ಬ್ಯಾಂಕ್‌ನ್ನು ಮೊದಲು ಯಾವ ಮಟ್ಟಕ್ಕೆ ತಂದಿದ್ದರೋ ಅದೇ ಮಟ್ಟಕ್ಕೆ ತರುವ ಪ್ರಯತ್ನ ಮಾಡುತ್ತಿದ್ದಾರೆ. ಅವರ ಬೇಡಿಕೆಗಳು ನ್ಯಾಯಸಮ್ಮತವಾಗಿದೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ ಸರ್ಕಾರ ಇಂಟೀರಿಯಮ್ ರಿಲೀಫ್ ಕೊಟ್ಟಿದೆ, ಆದಕಾರಣ ನಮಗೂ ಅದನ್ನು ಕೊಡಿ ಎಂಬ ಬೇಡಿಕೆಯನ್ನು ಅವರು ಇಟ್ಟಿದ್ದಾರೆ. ಸಹಕಾರಿ ಸಂಸ್ಥೆಗಳ ವೇತನವನ್ನು ನಾವು ಸರ್ಕಾರಿ ನೌಕರರ ವೇತನ ನೋಡಿ ಪರಿಷ್ಕರಣೆ ಮಾಡುವುದಕ್ಕಾಗುವುದಿಲ್ಲ. ಇಲ್ಲಿ ನಾವು ದುಡಿದು ಉಣ್ಣಬೇಕಾಗುತ್ತದೆ. ಲಾಭದಲ್ಲಿ ಹಂಚಿಕೊಳ್ಳಬೇಕಾಗುತ್ತದೆ. ಬಹುಶಃ ಹಾಸನದ ಡಿ.ಸಿ.ಸಿ. ಬ್ಯಾಂಕ್ ಇಲ್ಲಿಯವರೆಗೆ ಯಾವ ಒಬ್ಬ ಷೇರು ಹೋಲ್ಡರ್‌ಗೂ ಕೂಡ ಡಿವಿಡೆಂಟ್ ಕೊಟ್ಟಿಲ್ಲ. ಆದರೂ ಕೂಡ ಇವತ್ತು ಅದನ್ನು ಲಾಭದಲ್ಲಿ ತರುವಂತಹ ಪ್ರಯತ್ನ ಮಾಡಿದ್ದೇವೆ. ಅಲ್ಲದೇ ಆ ನೌಕರರಿಗೆ ಕೊಡತಕ್ಕಂಥ ಬೆನಿಫಿಟ್ ಕೂಡ ಕೊಟ್ಟಿದ್ದೇವೆ. ದಿನಾಂಕ : 1-1-96ರಲ್ಲಿ ಆಲ್ಲಿಯ ನೌಕರರ ವೇತನ ಪರಿಷ್ಕರಣೆ ಆಗಿದೆ. ಅವರಿಗೆ ಆ ಬೆನಿಫಿಟ್ ಕೊಡುವಾಗ ಮುಂದಿನ ಐದು ವರ್ಷಗಳಲ್ಲಿ ಪರಿಷ್ಕರಣೆಗೆ ಕೇಳಬಾರದು ಎಂಬ ಕಂಡೀಷನ್ ಅನ್ನು ಹಾಕಲಾಗಿದೆ. ಆ ಕಂಡೀಷನ್ ಪ್ರಕಾರ 1-1-96ರಲ್ಲಿ ವೇತನ ಪರಿಷ್ಕರಣೆಯಾಗಿ ಇನ್ನೂ ಕೇವಲ ಎರಡು ವರ್ಷವಾಗಿದೆ, ಅಂದರೆ ಇನ್ನೂ ಮೂರು ವರ್ಷದವರೆಗೆ ಅವರು ವೇತನ ಪರಿಷ್ಕರಣೆ ಕೇಳುವ ಹಾಗಿಲ್ಲ. ನಾವು ಕೊಡಲಿಕ್ಕೂ ಕೂಡ ಆಗುವುದಿಲ್ಲ. ಇದನ್ನೆಲ್ಲಾ ನಾವು ಹೇಳಿದರೂ ಕೂಡ, ಅಲ್ಲಿಯ ಅಧ್ಯಕ್ಷರು ಅಲ್ಲಿಯ ನೌಕರರಿಗೆ ನಾವು ಸರ್ಕಾರದ ಮನವೊಲಿಸಿ, ಸರ್ಕಾರಕ್ಕೆ ಪ್ರಸ್ತಾವನೆಯೊಂದನ್ನು ಕಳುಹಿಸಿ ನಿಮಗೆ ವೇತನ ಪರಿಷ್ಕರಣೆ ಕೊಡಿಸುತ್ತೇವೆ ಎಂದು ಹೇಳಿದ್ದಾರೆ. ಅವರು ಅಂತಹ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸುವ ಹಾಗಿಲ್ಲ. ಇಷ್ಟಾದರೂ ಕೂಡ ಅಲ್ಲಿಯ ನೌಕರರು ಇವತ್ತು ಸತ್ಯಾಗ್ರಹಕ್ಕೆ ಕುಳಿತಿದ್ದಾರೆ. ಅದು ಇಲ್ಲೀಗಲ್ ಸ್ಟ್ರೈಕ್ ಆಗಿದೆ. ಅದು ಇಲ್ಲೀಗಲ್ ಸ್ಟ್ರೈಕ್ ಎಂದು ಡಿಕ್ಲೇರ್ ಮಾಡಿ ಖಂಡಿತವಾಗಿಯೂ ಅವರ ಮೇಲೆ ಕ್ರಮ ತೆಗೆದುಕೊಂಡು ಜನರಿಗೆ ತೊಂದರೆಯಾಗದಂತೆ ಆ ಬ್ಯಾಂಕಿನ ಕಾರ್ಯ ಪ್ರಾರಂಭವಾಗುವಂತೆ ಮಾಡುತ್ತೇವೆ.

ಶ್ರೀ ಎ.ಜಿ. ರಾಮಸ್ವಾಮಿ :— ನೌಕರರು ಸರಿಯಾಗಿ ಕೆಲಸ ಮಾಡುವಂತೆ ನೋಡಿ ಕೊಳ್ಳಬೇಕಾದ ಜವಾಬ್ದಾರಿಕೆ ಸರ್ಕಾರದ್ದು, ಆಲಾಪೆಯದು. ಅದಕ್ಕೆ ನಾವು ಅಡಚಣೆ ಮಾಡುತ್ತಿಲ್ಲ. ಈಗ ಅವರ ನ್ಯಾಯಯುತವಾದ ಬೇಡಿಕೆ ಏನಿದೆ, ಅದನ್ನು ಈಡೇರಿಸಿ. ನೀವು ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ ಎಂದ ಮೇಲೆ ಅದನ್ನು ನೀವು ತ್ವರಿತವಾಗಿ ಕೊಟ್ಟಿದ್ದರೆ ಒಳ್ಳೆಯದಾಗುತ್ತಿತ್ತು. ಕಳೆದ ತಿಂಗಳು ಸಾಂಕೇತಿಕವಾಗಿ ಮುಷ್ಕರ ಮಾಡಿದ್ದಾರೆ. ಮುಷ್ಕರಕ್ಕೆ ಮೊದಲೇ ನೋಟೀಸ್ ಕೂಡ ಕೊಟ್ಟಿದ್ದಾರೆ. ಮತ್ತೆ 1ನೇ ತಾರೀಖಿನಿಂದ....

ಶ್ರೀ ಎಸ್.ಎಸ್. ಪಾಟೀಲ್:— ಅವರ ಬೇಡಿಕೆ ನ್ಯಾಯಯುತವಾಗಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ:— ನೀವು ಕೊಡುತ್ತೇವೆ ಎಂದು ಒಪ್ಪಿಕೊಂಡ ಮೇಲೆ ಅದನ್ನು ಕೊಟ್ಟು ಬಿಡಬೇಕಾಗಿತ್ತು.

ಶ್ರೀ ಎಸ್.ಎಸ್. ಪಾಟೀಲ್:— ನಾವು ಅವರ ಬೇಡಿಕೆಯನ್ನು ಈಡೇರಿಸುತ್ತೇವೆ ಎಂದು ಒಪ್ಪಿಕೊಂಡಿಲ್ಲ. ಈಗಾಗಲೇ 1-1-96ಕ್ಕೆ ಐದು ವರ್ಷದವರೆಗೆ ವೇತನ ಕರಾರು ಒಪ್ಪಂದ ಮಾಡಿಕೊಂಡು ಅಲ್ಲಿಯ ನೌಕರರಿಗೆ ವೇತನ ಪರಿಷ್ಕರಣೆ ಮಾಡಿದ್ದೇವೆ. ಈಗ ಅವರು ರಾಜ್ಯ ಸರ್ಕಾರ ನೌಕರರ ವೇತನ ಪರಿಷ್ಕರಣೆಯಾಗಿರುವುದರಿಂದ ನಮ್ಮ ವೇತನಗಳನ್ನೂ ಕೂಡ ಪರಿಷ್ಕರಿಸಿ ಎಂದು ಕೇಳುತ್ತಿದ್ದಾರೆ.

ಶ್ರೀ ಎ.ಟಿ. ರಾಮಸ್ವಾಮಿ:— ಮಾನ್ಯ ಅಧ್ಯಕ್ಷರೇ, ಮುಷ್ಕರದಿಂದಾಗಿ ಗ್ರಾಹಕರಿಗೆ ಬಹಳ ತೊಂದರೆಯಾಗುತ್ತಿದೆ. ಬ್ಯಾಂಕ್ ಚಟುವಟಿಕೆಯಿಂದ ಇರುವಂತೆ ಮಾಡಲು ತಾವು ದಯವಿಟ್ಟು ಸರ್ಕಾರಕ್ಕೆ ಸೂಚನೆ ಕೊಡಿ.

ಅಧ್ಯಕ್ಷರು:— ಮಾನ್ಯ ರಾಮಸ್ವಾಮಿಯವರೇ, ಮಾನ್ಯ ಮಂತ್ರಿಗಳು ಹೇಳಿದ್ದನ್ನು ತಾವು ಗಮನಿಸಿದಂತೆ ಕಾಣುತ್ತಿಲ್ಲ. ಸರ್ಕಾರ ಇತ್ತೀಚೆಗೆ ವೇತನಗಳ ಪುನರ್ ವಿಮರ್ಶೆ ಮಾಡಿದೆ ಎಂದು ಹೇಳಿ ಸಹಕಾರಿ ಸಂಸ್ಥೆಗಳ ನೌಕರರೂ ಕೂಡ ತಮ್ಮ ವೇತನ ಪರಿಷ್ಕರಣೆಗೆ ಕೇಳಿದರೆ ಹೇಗೆ? ಸಹಕಾರಿ ಸಂಸ್ಥೆ ಲಾಭ ಮಾಡಿ ಅದರಲ್ಲಿ ತನ್ನ ನೌಕರರ ವೇತನದ ಪುನರ್ ವಿಮರ್ಶೆ ಮಾಡಿಕೊಳ್ಳಬೇಕೇ ಹೊರತು, ಅವರ ಜೊತೆಗೂ ಇವರೂ ನಮಗೂ ಕೊಡಿ ಎಂದರೆ, ಇರುವುದನ್ನೆಲ್ಲವನ್ನೂ ಅವರಿಗೆ ಇವರಿಗೆ ಕೊಟ್ಟು, ನೀವು ಮತ್ತು ನಾವು ಜನರಿಗೇನು ಕೊಡುವುದಕ್ಕೆ ಉಳಿಯುತ್ತದೆ. ಮಾನ್ಯ ಮಂತ್ರಿಗಳು ನೌಕರರ ಬೇಡಿಕೆ ನ್ಯಾಯಯುತವಾಗಿಲ್ಲ ಎಂದೇನು ಹೇಳಿದರು ಅದನ್ನು ನಾವು ಸಮರ್ಥಿಸೋಣ. ಸಂಘಟಿತ ವಲಯಗಳ ಬೇಡಿಕೆಗಳಿಗೆ ಸರ್ಕಾರ ಬಗ್ಗಿ ಬಗ್ಗಿ ನೀಡಿದರೆ ಟ್ರೆಜರಿಗೆ ಏನೂ ಉಳಿಯದಂತಾಗಿದೆ, ಎಲ್ಲಾ ಅವರಿಗೇ ಹೋಗುತ್ತಿದೆ.

ಶ್ರೀ ಎಸ್.ಎಸ್. ಪಾಟೀಲ್:— ಮಾನ್ಯ ರಾಮಸ್ವಾಮಿಯವರೇ, ತಾವೂ ಕೂಡ ಅಲ್ಲಿಯ ಸದಸ್ಯರಾಗಿದ್ದೀರಿ. ತಾವೂ ಕೂಡ ಅಲ್ಲಿ ಸಾಲ ತೆಗೆದುಕೊಂಡಿದ್ದೀರಿ. ಇವತ್ತಿನವರೆಗೂ ಡಿಸಿಸಿ ಬ್ಯಾಂಕ್ ಏನಾದರೂ ತಮ್ಮ ಶೇರಿನ ಮೇಲೆ ಡಿವಿಡೆಂಟ್ ಏನಾದರೂ ಕೊಟ್ಟಿದೆಯೇ? ಈಗೇನೋ ಅದನ್ನು ನಾವು ಲಾಭಗಳಿಸುವ ಸ್ಥಿತಿಗೆ ತಂದಿದ್ದೇವೆ ಎಂದು ಹೇಳಿ ಬೇಡಿಕೆ ಇಡಲು ಆರಂಭಿಸಿದ್ದಾರೆ. ಮುಳುಗುವಂತಹ ಸ್ಥಿತಿಯಲ್ಲಿದ್ದನ್ನು ನಾವು ಒಳ್ಳೆಯ ಸ್ಥಿತಿಗೆ ತಂದಿದ್ದೇವೆ.

ಶ್ರೀ ಎ.ಟಿ. ರಾಮಸ್ವಾಮಿ :— ಡಿಸಿಸಿ ಬ್ಯಾಂಕ್ ನೌಕರರು ಅನಿರ್ದಿಷ್ಟ ಮುಷ್ಕರ ಮಾಡುತ್ತಿದ್ದಾರೆ. ಬ್ಯಾಂಕಿನ ಕಾರ್ಯಚಟುವಟಿಕೆಗಳೆಲ್ಲಾ ಸ್ಥಗಿತಗೊಂಡು ಗ್ರಾಹಕರಿಗೆ ಬಹಳ ತೊಂದರೆಯಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ :— ಅದಕ್ಕೆ ಬೇರೆ ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು :— ಸರ್ಕಾರಕ್ಕೆ ಇದೊಂದು ಸವಾಲು. ಯಾವಾಗ ಅವರ ಬೇಡಿಕೆಗಳು ನ್ಯಾಯಯುತವಲ್ಲವೆಂದು ಅವರಿಗೆ ಮನವರಿಕೆಯಾಗುತ್ತದೆ, ಆ ಸಂಸ್ಥೆಯನ್ನು ಮುಂದುವರಿಸಿಕೊಂಡು ಹೋಗತಕ್ಕಂಥ ಹೊಣೆ ಅವರ ಮೇಲೆ ಇರುತ್ತದೆ, ಅವರು ಅದನ್ನು ಮಾಡುತ್ತಾರೆ.

ಶ್ರೀ ಎ.ಟಿ. ರಾಮಸ್ವಾಮಿ :— ಬೇಗ ಅದು ಕಾರ್ಯಕಲಾಪ ಮಾಡುವಂತೆ ಕ್ರಮಕ್ಕಿಗೊಳ್ಳಲಿ.

ಅಧ್ಯಕ್ಷರು :— ಇದು ಬಹಳ ಒಳ್ಳೆಯ ಸಲಹೆ.

ಶ್ರೀ ಎಸ್.ಎಸ್. ಪಾಟೀಲ್ :— ಖಂಡಿತವಾಗಿಯೂ ಆ ಕೆಲಸ ಮಾಡುತ್ತೇವೆ.

(ಈ) ಅಂಗನವಾಡಿಗಳಿಗೆ ಉರುವಲು ವೆಚ್ಚ ನೀಡುವ ಬಗ್ಗೆ.

ಶ್ರೀ ಕುಂಭಿ ಸುಂದರರಾವ್ :— ಮಾನ್ಯ ಅಧ್ಯಕ್ಷರೇ, ರಾಜ್ಯದ ನಗರ ಪ್ರದೇಶಗಳಲ್ಲಿ ಇರುವ ಅಂಗನವಾಡಿಗಳಿಗೆ ಉರುವಲು ವೆಚ್ಚ ಎಂದು ಕೊಡುವ ಪದ್ಧತಿ ಇಲ್ಲ. ಗ್ರಾಮಾಂತರಗಳಲ್ಲಿರುವ ಅಂಗನವಾಡಿಗೆ...

ಅಧ್ಯಕ್ಷರು :— ಮಾನ್ಯ ಕುಂಭಿ ಸುಂದರರಾವ್‌ರವರೇ, ಮಾನ್ಯ ಮಂತ್ರಿಗಳು ತಮ್ಮ ಆರೋಗ್ಯ ಸರಿಯಿಲ್ಲವೆಂದು ನನಗೆ ಪತ್ರ ಬರೆದಿದ್ದಾರೆ ಹಾಗೂ ವೈಯಕ್ತಿಕವಾಗಿ ನನಗೆ ಹೇಳಿ ಹೋಗಿದ್ದಾರೆ. ಅವರು ಕಳೆದ ನಾಲ್ಕು ದಿವಸಗಳಿಂದಲೂ ಕೂಡ ಬಂದಿಲ್ಲ. ಇವತ್ತು ಒಂದು ದಿವಸ ಬಂದು ಹೋದರು. ಈ ವಿಚಾರವನ್ನು ನಾಳೆ ತೆಗೆದುಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳ ಪತ್ರದ ಬಗ್ಗೆ ನನಗೆ ಮರೆತೇ ಹೋಗಿತ್ತು.

(ಉ) ಕಬ್ಬಿನ ಬೆಳೆ ಅನೆಗಳ ಹಾವಳಿಯಿಂದ ಹಾನಿಗೀಡಾಗಿರುವುದರ ಬಗ್ಗೆ.

ಶ್ರೀ ಡಿ.ಬಿ. ಇನಾಂದಾರ್ (ಕಿತ್ತೂರು) :— ಮಾನ್ಯ ಅಧ್ಯಕ್ಷರೇ, ಬೇರೆ ಕಡೆ ಇನ್ನಿತರ ರೀತಿಯ ಕಾಟಗಳಿದ್ದರೆ ನಮ್ಮಲ್ಲಿ ಕಬ್ಬಿನ ಬೆಳೆಗೆ ಆನೆಗಳ ಹಾವಳಿಯಿಂದ ತೊಂದರೆಯಾಗಿದೆ. ಆನೆಗಳು ಕಬ್ಬಿನ ಬೆಳೆಯನ್ನು ತಿಂದು ಹಾಳು ಮಾಡುತ್ತಿವೆ.